ಶ್ರೀ ಎಂ. ಪಿ. ವೆಂಕಟೇಶ್.—ತಾರಕಾ ಲಿಫ್ಟ್ ಇರಿಗೇಷನ್ ಮಾಡದಿದ್ದರೆ ನಾವು ಕಬಿನಿ ಎರಡನೇ ಹಂತದ ಯೋಜನೆ ಪ್ರಾರಂಭ ಮಾಡುವುದಕ್ಕೆಬಿಡುವುದು ಇಲ್ಲ;

ಶ್ರೀ ವಾಟಾಳ್ ನಾಗರಾಜ್.— ಏವರು ಬಿಡುವುದೇ ಇಲ್ಲ ಎಂದರೆ ಉತ್ತರ ಹೇಗೆ ಸ್ವಾಮಿ ? ತಾರಕಾ ಯೋಜನೆ ಮಾಡುವ ಬಗ್ಗೆ ನಮ್ಮ ವಿರೋಧ ಇಲ್ಲವಲ್ಲ. ಆದ್ದರಿಂದ, ದಯವಾಡಿ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಕೊಡಬೇಕು.

ಶ್ರೀ ಎಂ. ಪಿ. ವೆಂಕಟೇಶ್.— ತಾರಕ ಯೋಜನೆಯನ್ನು ಮಾಡಿದ ನಂತರ ಅದನ್ನು ಮಾಡಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಅಧ್ಯಕ್ಷರೇ, ನನ್ನ ಮುಂದಿರತಕ್ಕ ಪ್ರಶ್ನೆ ತಾರಕಾ ಯೋಜನೆಗೆ ಸಂಬಂಧಪಟ್ಟ ಹಾಗೆ ಸನ್ಮಾನ್ಯ ಸದಸ್ಯರಾದ ವಾಟಾಳ್‌ನಾಗರಾಜ್‌ರವರು ಕಬಿನಿ ೨ನೇ ಹಂತದ ಬಗ್ಗೆ ಕೇಳುತ್ತಿದ್ದಾರೆ. ಅವರು ಈ ಬಗ್ಗೆ ಬೇರೆ ಪ್ರಶ್ನೆಯನ್ನು ಹಾಕಲಿ; ನಾನು ಉತ್ತರ ಒದಗಿಸುತ್ತೇನೆ.

ಅಧ್ಯಕ್ಷರು.— ನೀವು ಕಬಿನಿ ಬಗ್ಗೆ ಬೇರೆ ಪ್ರಶ್ನೆಯನ್ನು ಕೇಳಿ.

ಚಂಳಂಕಿನಾಲಾ ಯೋಜನೆ

೧೩೨೭ ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚುಳುಕಿನಾಲಾ ಯೋಜನೆಯ ಅಂದಾಜು ವೆಚ್ಚ ಎಷ್ಟು ;

ಆ) ಇಲ್ಲಿಯವರೆಗೆ ಖರ್ಚು ಮಾಡಲಾಗಿರುವ ಹಣವೆಷ್ಟು ;

ಇ) ಯಾವ ಯಾವ ಗ್ರಾಮಗಳ ಜಮೀನು ಈ ಯೋಜನೆಯಲ್ಲಿ ಮುಳುಗಡೆಯಾಗುವುದು (ವಿವರ ತಿಳಿಸಿ);

ಈ) ಇಲ್ಲಿಯವರೆಗೆ ಎಷ್ಟು ಜನ ಜಮೀನು ಮುಳುಗಡೆಯಾದವರಿಗೆ ಪರಿಹಾರಧನ ನೀಡಲಾಗಿದೆ (ವಿವರ ನೀಡುವುದು);

ಉ) ಧನ್ನೂರ ಗ್ರಾಮದ ಕೆಲವು ಜಮೀನು ಈ ಯೋಜನೆಯಲ್ಲಿ ಮುಳುಗಡೆಯಾಗಿದ್ದರೂ ಈವರೆಗೂ ಅವರಿಗೆ ಪರಿಹಾರ ಧನ ನೀಡದಿರಲು ಕಾರಣವೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧೯೭೫–೭೬ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಅಡಳಿತಾತ್ಮಕ ಮಂಜೂರಾತಿಯಾದ ಅಂದಾಜು ಮೌಲ್ಯ ೩೮೦ ಲಕ್ಷ ರೂ.ಗಳು ಪ್ರಸ್ತುತ ದರದ ಪ್ರಕಾರ ಪರಿಷ್ಕೃತ ಅಂದಾಜು ೧೯೪೫ ಲಕ್ಷ ರೂ.ಗಳು.

ಆ) ಮಾರ್ಚ್ ೯೦ರ ಅಂತ್ಯಕ್ಕೆ ೩೯೬ ಲಕ್ಷ ರೂಪಾಯಿಗಳು.

ಇ) ಬೇಲೂರು, ಬೆಟಬಾಲಕಂದಾ, ಜಾನಾಪುರ, ಧನ್ನೂರ (ಕೆ) ಪಂಚಲಂ ಹಾಗೂ ಮುಸಾತ್ಪುರ ಆರಂ ಗ್ರಾಮಗಳ ೧೯೨೬ ಎಕರೆ ಜಮೀನು ಮುಳುಗಡೆಯಾವುದು.

ಈ) ೨೫೧ ಜನರಿಗೆ ಅನ್ವಯಿಸಿದಂತೆ ೯೯೮ ಎಕರೆ ಜಮೀನು ಮುಳುಗಡೆಯಾಗಿರುವುದಕ್ಕೆ ೫೦.೭೭ ಲಕ್ಷ ರೂ. ಪರಿಹಾರ ಧನನೀಡಲಾಗಿದೆ.

ಉ) ಆಣೆಕಟ್ಟಿನ ಕೆಲಸ ನಿರ್ಮಾಣ ಹಂತದಲ್ಲಿದೆ. ಜಲಾಶಯದ ಗರಿಷ್ಟಮಟ್ಟಹೆಚ್ಚಳ ಮಾಡಲಾಗಿರುವ ಕಾರಣ, ಹೆಚ್ಚುವರಿ ಮುಳುಗಡೆಯಾಗುವ ಧನ್ನೂರ (ಕೆ) ಗ್ರಾಮದ ಜಮೀನಿಗೆ ಪರಿಹಾರಧನ ನೀಡಬೇಕಾಗಿದೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್.— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ತಪ್ಪು ಉತ್ತರದಲ್ಲಿ ಚುಳಿಕಿನಾಲಾ ಯೋಜನೆ ಬಗ್ಗೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ನಾನು ಕೆಲವು ವಿಚಾರಗಳನ್ನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಏನೆಂದರೆ ಚುಳಿಕಿನಾಲಾ ಆಣೆಕಟ್ಟು ಕಟ್ಟುವುದರಿಂದ ಧನ್ನೂರ ಗ್ರಾಮದ ಜಮೀನುಗಳು ಮುಳುಗಡೆಯಾಗುತ್ತವೆ. ಈ ಕೆಲಸದಿಂದ ಮುಳುಗಡೆಯಾಗುವ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಪರಿಹಾರವನ್ನು ಕೊಡಲಾಗಿದೆ. ಆದರೆ, ಇನ್ನೂ ಸ್ವಲ್ಪ ಜಮೀನು ಈ ಆಣೆಕಟ್ಟಿನಿಂದ ಮುಳುಗಡೆಯಾಗುವ ಸಂದರ್ಭ ಇರುವುದರಿಂದ

ಆ ಜಮೀನುಗಳನ್ನೂ ಸ್ವಾಧೀನಪಡಿಸಿಕೊಳ್ಳಲಾಗಿದೆ. ಆದರೆ, ಈ ಎರಡನೇ ಸಾರಿ ಸ್ವಾಧೀನ ಪಡಿಸಿಕೊಂಡ ಜಮೀನುಗಳ ಮೂಲೀಕರುಗಳಿಗೆ ಇನ್ನೂ ಪರಿಹಾರ ಧನವನ್ನು ಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರದ ಹತ್ತಿರ ಮಾಹಿತಿ ಇದ್ದರೆ ತಿಳಿಸಬೇಕು. ಆಮೇಲೆ ಈ ಚುಳುಕಿನಾಲಾ ಪ್ರಾಜೆಕ್ಟಿಗೆ ಸರಿಯಾದ ರೀತಿಯಲ್ಲಿ ಹಣಕಾಸನ್ನು ಸರ್ಕಾರ ಒದಗಿಸಿಲ್ಲ. ಅದಕ್ಕಾಗಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಣವನ್ನು ಒದಗಿಸಿ ಈ ಯೋಜನೆಯನ್ನು ಬೇಗ ಮುಗಿಸಬೇಕೆನ್ನುವ ನಮ್ಮ ಭಾಗದ ಜನರ ಭಾವನೆ ಏನಿದೆ, ಅದರಂತೆ ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಆಮೇಲೆ, ಧನ್ನೂರ ಗ್ರಾಮದ ಅರ್ಧ ಭಾಗ ಭೂಮಿ ಈ ಆಣೆಕಟ್ಟಿನಿಂದ ಮುಳುಗಡೆಯಾಗುತ್ತಿದೆ. ಇನ್ನರ್ಧ ಭಾಗ ಮುಳುಗಡೆಯಾಗುತ್ತಿಲ್ಲ. ಈ ರೀತಿ ಅರ್ಧಬರ್ಧ ಮುಳುಗಡೆಯಾದರೆ ಕಷ್ಟವಾಗುತ್ತದೆ. ಆದ್ದರಿಂದ ಸಂಪೂರ್ಣವಾಗಿ ಈ ಊರನ್ನು ಮುಳುಗಡೆ ಮಾಡಿಸಿ ಅಲ್ಲಿರುವ ಜನರುಗಳಿಗೆಲ್ಲಾ ಬೇರೆ ಕಡೆ ಸ್ಥಳಾಂತರ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ನಿರ್ದಿಷ್ಟವಾದ ಅಭಿಪ್ರಾಯವನ್ನು ಮಾನ್ಯ ಸಚಿವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಸನ್ಮಾನ್ಯ ಅಧ್ಯಕ್ಷರೇ, ಚುಳುಕಿನಾಲಾ ಅಣ್ಣೆಕಟ್ಟನ್ನು ಗರಿಷ್ಠ ೫೯೦ ಅಡಿಗೆ ಗರಿಷ್ಠ ಮಟ್ಟಕ್ಕೆ ಹೆಚ್ಚಿಸ ಬೇಕೆಂದು ಯೋಜನೆ ತಯಾರಾಗಿತ್ತು. ಆಗ ಅದಕ್ಕೆ ೧೩೫ ಎಕರೆ ಭೂಮಿ ಮುಳುಗಡೆಯಾಗುತ್ತಿತ್ತು. ನಂತರ ಈ ಆಣೆಕಟ್ಟಿನ ಗರಿಷ್ಠ ಮಿತಿಯನ್ನ ೫೯೨ಕ್ಕೆ ಮಾಡಿದ್ದರಿಂದ ೧೯೭೬ ಎಕರೆ ಮುಳುಗಡೆ ಆಗುವ ಹಾಗಾಯಿತು. ಈ ರೀತಿ ಹೆಚ್ಚುವರಿಯಾಗಿ ಮುಳುಗಡೆಯಾಗುವ ಪ್ರದೇಶಕ್ಕೆ ಭೂ ಸ್ವಾಧೀನ ಕಾರ್ಯಕ್ರಮವನ್ನು ಈಗಾಗಲೇ ಕೈಗೆತ್ತಿಕೊಂಡಿದ್ದೇವೆ.

ಇದರಲ್ಲಿ ಧನ್ನೂರ (ಕೆ) ಗ್ರಾಮದ ೧೩೯ ಎಕರೆ ಮಾತ್ರ ಭೂಮಿ ವಶಪಡಿಸಿಕೊಂಡಿದ್ದರು. ಈಗ ೨೭೪ ಎಕರೆ ಬೇಕಾಗಿರುವುದರಿಂದ ಇದನ್ನೂ ಕೂಡ ವಶಪಡಿಸಿಕೊಂಡು ಪರಿಹಾರ ಕೊಡುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ೧೩೯ ಎಕರೆಗಳಿಗೆ ಈಗಾಗಲೇ ಸುಮಾರು ೭ ಲಕ್ಷದ ೯೭ ಸಾವಿರ ರೂಪಾಯಿಗಳನ್ನು ಪಾವತಿ ಮಾಡಿದ್ದಾರೆ. ಉಳಿದ ಹಣವನ್ನು ಕೊಡುವುದಕ್ಕೆ ಶೀಘ್ರದಲ್ಲೇ ಆದೇಶವನ್ನು ಕೊಡಲಿದ್ದೇವೆ. ಈ ಕೆಲಸಕ್ಕೆ ಆಯವ್ಯಯದಲ್ಲಿ ಕೊಟ್ಟ ಹಣವು ಬಹಳ ಕಡಿಮೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದುದರಿಂದ ಹೈದ್ರಾಬಾದ್ ಅಭಿವೃದ್ಧಿ ಯೋಜನೆಯಲ್ಲಿ ಸ್ವಲ್ಪ ಹಣವನ್ನು ಇದಕ್ಕೆ ಕೊಟ್ಟು ಆ ಕೆಲಸವನ್ನು ಜೀವ್ರಗೊಳಿಸುವುದಕ್ಕೆ ಪ್ರಯತ್ನಗಳು ನಡೆಯುತ್ತಿವೆ ಎಂದು ಹೇಳಬಯಸುತ್ತೇನೆ. ಇದೊಂದು ಗೋದಾವರಿ ಬೇಸಿನ್‌ನಲ್ಲಿ ಬರುವ ಜಿಡಿಯಂ ಪ್ರಾಜೆಕ್ಟ್. ಈ ಪ್ರಾಜೆಕ್ಟ್ ಅತಿಪ್ರಾಮುಖ್ಯತೆಯನ್ನು ಹೊಂದಿದೆ ಎಂಬುದನ್ನು ಕೂಡ ನಾವು ಮನಗಂಡಿದ್ದೇವೆ. ಆದುದರಿಂದ ಇದನ್ನು ಪೂರ್ಣಗೊಳಿಸುವುದಕ್ಕೆ ಎಲ್ಲಾ ವಿಧವಾದ ಪ್ರಯತ್ನಗಳನ್ನು ಮಾಡುತ್ತೇವೆ ಎಂಬ ಭರವಸೆಯನ್ನು ಕೊಡಬಯಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್.—ಧನ್ನೂರ್ (ಕೆ) ಗ್ರಾಮದ ಕೆಲವೊಂದು ಸರ್ವೇನಂಬರ್‌ಗಳ ಪ್ರದೇಶವು ಮುಳುಗಡೆಯಾಗಿದ್ದು, ಕೆಲವರಿಗೆ ಇನ್ನೂ ಪರಿಹಾರಧನ ಸಿಕ್ಕಲ್ಲಿಲ್ಲ. ಅಂಥವರಿಗೆ ಕೂಡಲೇ ಪರಿಹಾರಧನ ಸಿಗುವಂತೆ ಮಾಡಬೇಕು. ಅಂತೆಯೇ ಅಲ್ಲಿಯ ಸಮೀಪದ ಬಾಲ್ಕುಂದ ಎಂಬ ಊರು ಅರ್ಧ ಭಾಗ ಮುಳುಗಡೆಯಾಗಿದೆ. ಈಗ ಅಲ್ಲಿಯ ಜನರು ಉಳಿದವರು ಕೂಡ ನಮಗೂ ಬೇರೆ ಕಡೆಗೆ ಜಾಗವನ್ನು ಒದಗಿಸಿಕೊಡಿ ಎಂದು ಕೇಳಿಕೊಳ್ಳುತ್ತಾ ಇದ್ದಾರೆ. ಆ ಬಗ್ಗೆ ಮಾನ್ಯ ಸಚಿವರು ಪರಿಶೀಲನೆ ಮಾಡುತ್ತಾರೆಯೇ ಹೇಗೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈಗ ಒಟ್ಟಾರೆ ಮುಳುಗಡೆ ಆಗುವ ಪ್ರದೇಶದ ವಿವರವನ್ನು ಹೇಳಿದ್ದೇನೆ. ಅಲ್ಲಿನ ಮುಳುಗಡೆ ಪ್ರದೇಶದವರಿಗೆ ಪರಿಹಾರವನ್ನು ಕೊಡತಕ್ಕಂಥ ಪ್ರಯತ್ನ ನಡೆಯುತ್ತಾ ಇದೆ. ಈ ಪ್ರಾಜೆಕ್ಟಿನ ಮುಂದುವರಿಕೆಯ ಅನುಗುಣವಾಗಿ ಮುಳುಗಡೆಯಾದ ಪ್ರದೇಶಗಳಿಗೆ ಆದ್ಯತೆಕೊಟ್ಟುಕೊಂಡು ಹಣದ ಪಾವತಿ ಮಾಡಲು ನಿರ್ದೇಶನ ಕೊಟ್ಟಿದ್ದೇವೆ. ಉಳಿದವರಿಗೆ ತೊಂದರೆಯಾಗದಂತೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮತ್ತು ಮುಳುಗಡೆಯಾದ ಗ್ರಾಮದ ಜನರನ್ನು ಸ್ಥಳಾಂತರಿಸಲು ಈಗಾಗಲೇ ಆದೇಶ ಕೊಟ್ಟಿದ್ದೇವೆ. ಮತ್ತು ಅದನ್ನು ಪರಿಶೀಲಿಸೋಣ. ಅರ್ಧ ಊರು ನೀರಾವರಿ ಪ್ರದೇಶದಲ್ಲಿ ಮುಳುಗಡೆ ಆಗುತ್ತಿರುವ ಕಾರಣ ಪೂರ್ಣ ಊರನ್ನೇ ಬೇರೆ ಕಡೆಗೆ ಸ್ಥಳಾಂತರ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಏನು ಕೇಳಿದ್ದಾರೆ, ಅದನ್ನು ಪರಿಶೀಲಿಸಲಾಗುವುದು.

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಸಭಾಧ್ಯಕ್ಷರೇ, ಈ ಚುಳಕಿನಾಲಾ ಯೋಜನೆ ಅಂದಾಜನ್ನು ೧೯೭೫–೭೬ರಲ್ಲಿ ೩೮೦ ಲಕ್ಷ ರೂ.ಗಳು ಎಂದು ಅಂದಾಜು ಮಾಡಲಾಗಿತ್ತು. ಈಗಾಗಲೇ ೩೯೬ ಲಕ್ಷ ರೂ. ಗಳನ್ನು ಆದಕ್ಕಾಗಿ ಖರ್ಚು ಮಾಡಿದ್ದಾರೆ. ಹಾಗಾದರೆ ಅಂದಾಜು ತಯಾರು ಮಾಡುವಾಗ

ಒಟ್ಟು ವೆಚ್ಚದ ಕಲ್ಪನೆ ಬರುವುದಿಲ್ಲವೇ ? ಈಗಾಗಲೇ ೧೬ ಲಕ್ಷ ರೂಪಾಯಿಗಳ ಹೆಚ್ಚುವರಿ ವೆಚ್ಚ ಮಾಡಿದ್ದಾರೆ. ಇನ್ನು ಮುಂದಾದರೂ ಅಂದಾಜು ತಯಾರು ಮಾಡುವಾಗ ಇದನ್ನು ಆಧಾರವಾಗಿಟ್ಟು ಕೊಂಡು ಅಂದಾಜು ಹಾಗು ಅಂತಿಮವಾಗಿ ತಗಲುವ ವೆಚ್ಚವನ್ನು ಸರಿಯಾದ ರೀತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಇನ್ನು ಪರಿಹಾರದ ಬಗ್ಗೆ the Comptroller and Auditor General of India in his report ನಲ್ಲಿ ಕೆಲವೊಂದು ಅಬ್ಸರ್‌ವೇಶನ್ಸ್ ಮಾಡಿದ್ದಾರೆ. ಪರಿಹಾರ ಕೊಡುವಲ್ಲಿ ನಿರ್ಮಿಂದಾದ ತಡದಿಂದಾಗಿ ಇಷ್ಟು ಹಣ ಎಕ್ಸ್‌ಟ್ರಾ ಕೊಡಬೇಕಾಯಿತು ಎನ್ನುವುದನ್ನು ಎತ್ತಿಹೇಳಿದ್ದಾರೆ. I read page-3 of CAG Report dated 31st May 1988 :

> "The cases pending finalisation as on 30th April, 1982 and those initiated after September, 1984, a further sum equal to 12% of the market value as datermined above shall be paid only from the date of publication of preliminary notification to the date of award or taking possession of the land whichever is earlier."

ಈಗ ನೀವು ೧೯೭೫–೭೬ ರಿಂದ ೪:೬, ೬:೧ ನೋಟಿಫಿಕೇಶನ್ ಹಾಕಿ ಪರಿಹಾರ ಕೊಡದೆ ಈ ಒಂದು ಚುಳಕಿನಾಲಾ ವಿಚಾರದಲ್ಲಿ ಎಷ್ಟು ಎಸ್ಪಿಮೆಟ್‌ಗಿಂತಲೂ ಅಡಿಶನಲ್ ಹಣವನ್ನು ಪರಿಹಾರವಾಗಿ ಕೊಟ್ಟಿದ್ದೀರಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ವಿರೋಧ ಪಕ್ಷದ ನಾಯಕರಂ ಎರಡು ಸಲಹೆಗಳನ್ನು ಕೊಟ್ಟಿದ್ದಾರೆ, ಒಂದು ಯೋಜನೆಯನ್ನು ತಯಾರು ಮಾಡುವಾಗ ಮೂಲತಃ ಕೂಡಿದಂಥ ಅಂದಾಜಿಗೂ ಮುಗಿಯುವಾಗಿನ ವೆಚ್ಚಕ್ಕೂ ಅಂತರ ಕಡಿಮೆ ಇರಬೇಕೆಂದು ಹೇಳಿ ಇದಕ್ಕೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸಲಹೆ ಮಾಡಿದ್ದಾರೆ.

೧೧–೩೦ ಎ. ಎಂ.

ಇದು ಬಹಳ ಸೂಕ್ಷ್ಮ ಸಲಹೆ. ನಮ್ಮ ರಾಜ್ಯದ ಎಲ್ಲ ನೀರಾವರಿ ಯೋಜನೆಗಳಲ್ಲೂ ಈ ದೋಷ ಇದೆ. ಮೂಲ ಯೋಜನೆಯ ೩೦ರಷ್ಟು ೫೦ರಷ್ಟು ಜಾಸ್ತಿ ಹಣ ಖರ್ಚು ಆಗಿರುವ ಉದಾಹರಣೆಗಳಿವೆ. ಈ ಪ್ರಕರಣದಲ್ಲೂ ೩೮೦ ಲಕ್ಷಕ್ಕೆ ಎಸ್ಟಿಮೇಟ್ ಆಗಿದ್ದರೆ, ಈಗ ಅದಕ್ಕೆ ಬೇಕಾಗಿರುವುದು ಸುಮಾರು ೨೫ ಕೋಟಿ. ಈ ಬಗ್ಗೆ ತಾವು ಕೊಟ್ಟಿರುವುದು ಬಹಳ ಉಪಯುಕ್ತವಾದ ಸಲಹೆ, ಈ ಕಡೆ ಸರ್ಕಾರ ಗಮನಕೊಡುವುದು ಅಗತ್ಯವೆಂದು ನಾನು ಹೇಳಬಯಸುತ್ತೇನೆ. ಮತ್ತೊಂದು ಆ ಪ್ರಮುಖವಾದ ಪ್ರಶ್ನೆ ಎಂದರೆ ಭೂಸ್ವಾಧೀನದಲ್ಲಿ ಹೆಚ್ಚುವರಿ ಹಣ ಕೊಡುವುದು ನಮ್ಮಲ್ಲಿ ಸರ್ವೇಸಾಮಾನ್ಯವಾಗಿದೆ. ಇದುವರೆಗೂ ಸರ್ಕಾರ ಆ ಕಡೆ ಗಮನಹರಿಸಲಿಲ್ಲವೆಂದರೆ ತಪ್ಪಾಗದು. ಇದೇ ರೀತಿ ಆದರೆ ನಮ್ಮ ಖಜಾನೆ ದುಡ್ಡೆಲ್ಲ ಇದಕ್ಕೇ ಹೋಗುತ್ತದೆ. ಆದ್ದರಿಂದ ಇದನ್ನೂ ಕೂಡ ಆದಷ್ಟು ಬೇಗ ಪರಿಶೀಲನೆ ಮಾಡುತ್ತೇನೆ. ರಾಜ್ಯ ಸರ್ಕಾರದ ಪರವಾಗಿ ಅವರ ಸಲಹೆಗಳಿಗಾಗಿ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಸಿ. ಬೈರೇಗೌಡ,—ಈ ಯೋಜನೆ ೭೫-೭೬ರಲ್ಲಿ ಪ್ರಾರಂಭವಾಗಿ ಪರಿಹಾರ ಧನ ಕೊಟ್ಟಿದ್ದು ಕೇವಲ ೫೦.೭ ಲಕ್ಷ ಆಗಿದೆ, ಇದರಲ್ಲಿ ಅಂದಿನ ಅಂದಾಜು ವೆಚ್ಚದ ಪ್ರಕಾರ ಎಷ್ಟು ಪರಿಹಾರಧನ ಕೊಡಬೇಕಾಗಿತ್ತು. ಏಕೆಂದರೆ ಇನ್ನೂ ಎರಡಿಗೂ ಕೆಲವರಿಗೆ ಕೊಟ್ಟಿಲ್ಲ, ಅದೇ ರೀತಿ ಪರಿಸ್ಥಿತಿ ಅನೇಕ ಕಡೆಯಿದೆ. ಆದ್ದರಿಂದ ಇನ್ನು ಮುಂದೆ ಸರ್ಕಾರ ಈ ಬಗ್ಗೆ ಒಂದು ನೀತಿಯನ್ನು ಹಾಕಿಕೊಂಡು ೪(೧) ಮತ್ತು ೬(೧) ಆದಮೇಲೆ ಇಷ್ಟು ದಿನದೊಳಗಾಗಿ ಭೂಮಿ ಕಳೆದುಕೊಂಡ ರೈತರಿಗೆ ಹಣ ಕೊಡುವ ನೀತಿ ರೂಪಿಸುವಿರಾ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಬಹಳ ಉತ್ತಮವಾದ ಸಲಹೆ.

ಶ್ರೀ ಸಿ. ಬೈರೇಗೌಡ.—ರೂಪಿಸುತ್ತಾರೋ ಇಲ್ಲವೋ ಹೇಳಿಬಿಡಲಿ.

ಅಧ್ಯಕ್ಷರು.—ಉತ್ತಮವಾದ ಸಲಹೆ ಎಂದರೆ ರೂಪಿಸುರಂತಾರೆಂದು ಅರ್ಥ.

ಶ್ರೀ ಸಿ. ಬೈರೇಗೌಡ.—ಅದನ್ನು ಮಾನ್ಯ ಮಂತ್ರಿಗಳು ಹೇಳಲಿ. ಅವರು ಹೇಳಿದರೆ ನನಗೆ ಸಂತೋಷ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅದನ್ನು ನನ್ನ ಬಾಯಲ್ಲಿಯೇ ಕೇಳುವುದಿದ್ದರೆ ಅದನ್ನು ರೂಪಿಸುತ್ತೇವೆ.

ಪ್ರಶ್ನೆ. ಳಳಟ (೧೦೮೦)

(ಮಾನ್ಯ ಸದಸ್ಯರು ಸಭೆಯಲಿ ಹಾಜರಿರಲಿಲ್ಲ).

ಶಹಾಬಾದ್ ಪಟ್ಟಣದಲ್ಲಿ ನ್ಯಾಯಾಲಯಂ ಸ್ಥಾಪನೆ

೧೨೩೨. ಶ್ರೀ ಬಿ. ಎಸ್. ಚವ್ಹಾಣ್ (ಶಹಾಬಾದ್).—ಮಾನ್ಯ ಯೋಜನಾ, ಕಾನೂನು, ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಾಬಾದ್ ಪಟ್ಟಣದಲ್ಲಿ ನ್ಯಾಯಾಲಯ ಸ್ಥಾಪನೆ ಮಾಡಲಾಗುವುದೆ ?

ಆ) ಹಾಗಿದ್ದಲ್ಲಿ, ಎಂದಿನಿಂದ ನ್ಯಾಯಾಲಯವನ್ನು ಸ್ಥಾಪನೆ ಮಾಡಲಾಗುವುದಂ ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನಂ ?

ಶ್ರೀ ಎಂ. ವೀರಪ್ಪ ಮೊಯಿಲಿ (ಯೋಜನೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಪ್ರವಾಸೋದ್ಯಮ ಮಂತ್ರಿಗಳು).—

ಅ) ಇಲ್ಲ.

ಆ) ''ಅ'' ಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸಧ್ಯದಲ್ಲಿ ಉಚ್ಚ ನ್ಯಾಯಾಲಯದಿಂದ ಪ್ರಸ್ತಾವನೆಯಿರುವುದಿಲ್ಲ.

ಶ್ರೀ ಬಿ. ಎಸ್. ಚವ್ಹಾಣ್.—ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಶಹಾಬಾದ್‌ನಲ್ಲಿ ನ್ಯಾಯಾಲಯ ಸ್ಥಾಪಿಸುವ ಪ್ರಸ್ತಾವನೆ ಇಲ್ಲವೆಂದಿದ್ದಾರೆ. ಎರಡು ಮೂರು ವರ್ಷಗಳ ಹಿಂದೆ ಶಹಾಬಾದ್ ಪಟ್ಟಣದಲ್ಲಿ ನ್ಯಾಯಾಲಯ ನಡೆಯುತ್ತಿತ್ತು. ಈಗೇಕೆ ನಡೆಯುತ್ತಿಲ್ಲವೆಂದು ಕೇಳಿದ್ದಕ್ಕೆ ಸಮರ್ಪಕ ಉತ್ತರ ಕೊಟ್ಟಿಲ್ಲ. ಶಹಾಬಾದ್‌ನಲ್ಲಿದ್ದ ನ್ಯಾಯಾಲಯವನ್ನು ಯಾವ ಕಾರಣಕ್ಕಾಗಿ ನಿಲ್ಲಿಸಲಾಯಿತು ಎಂದು ಸಚಿವರು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಲ್ಲಿ ನ್ಯಾಯಾಲಯ ನಡೆಯದಿರುವುದಕ್ಕೆ ಕಾರಣ ನ್ಯಾಯಾಲಯಗಳು ಅಲ್ಲಿ ಇಲ್ಲ ಅಷ್ಟೆ, ಈಗ ನ್ಯಾಯಾಲಯಗಳನ್ನು ಎಲ್ಲೆಲ್ಲಿ ಸ್ಥಾಪಿಸಬೇಕು ಎಂದು ಹೇಳುವುದು ಉಚ್ಚ ನ್ಯಾಯಾಲಯಕ್ಕೆ ಬಿಟ್ಟಿದ್ದು. ಅವರು ಶಿಫಾರಸನ್ನು ಮಾಡಿದರೆ ಅದನ್ನು ಮಂಜೂರು ಮಾಡುವ ಕೆಲಸ ಮಾತ್ರ ನಮ್ಮದು. ಈಗಾಗಲೇ ಅಬ್ದುಲ್‌ಪುರ ಜೇವರ್ಗಿ ಶಹಾಬಾದ್ ಈ ಮೂರೂ ಕಡೆ ಜೆ.ಎಂ.ಎಫ್.ಸಿ ಕೋರ್ಟ್‌ಗಳನ್ನು ಸ್ಥಾಪಿಸಲು ಆ ಕಡೆಯಿಂದ ಮನವಿಗಳು ಬಂದಿವೆ. ಆ ಪ್ರದೇಶದ ಶಾಸಕರು ಸಹ ಮನವಿ ಮಾಡಿದ್ದಾರೆ. ಈ ಬಗ್ಗೆ ನಾವು ಶ್ರೇಷ್ಟ ನ್ಯಾಯಾಲಯಕ್ಕೆ ಅಲ್ಲಿ ಸ್ಥಾಪನೆ ಮಾಡುವ ಅವಶ್ಯಕತೆ ಇದೆಯೆಂದು ಸರ್ಕಾರದ ಮಟ್ಟಿಗೆ ತಿಳಿಸಿದ್ದೇವೆ. ಆ ಬಗ್ಗೆ ಪ್ರಸ್ತಾವನೆಗಳು ಪರಿಶೀಲನೆಯಲ್ಲಿವೆ ಎಂದು ಶ್ರೇಷ್ಟ ನ್ಯಾಯಾಲಯದಿಂದ ನಮಗೆ ಉತ್ತರ ಬಂದಿದೆ. ಅಂತಿಮವಾಗಿ ತಮ್ಮ ನಿರ್ಣಯವನ್ನು ತಿಳಿಸಬೇಕು ಎಂದೂ ನಾವು ಪುನಃ ಉಚ್ಚ ನ್ಯಾಯಾಲಯಂಕ್ಕೆ ಇದರ ಬಗ್ಗೆ ಜ್ಞಾಪನಾ ಪತ್ರದ ಮೂಲಕ ತಿಳಿಸಿದ್ದೇವೆ.

ಶ್ರೀ ಬಿ. ಎಸ್. ಚವ್ಹಾಣ್.—ನ್ಯಾಯಾಲಯವು ಶಹಾಬಾದ್‌ನಲ್ಲಿ ನಡೆಯುತ್ತಿತ್ತು. ನಾನೂ ಕೂಡ ಅದನ್ನು ಕಣ್ಣಾರೆ ನೋಡಿದ್ದೇನೆ. ಬಹುಶಃ ಅಧಿಕಾರಿಗಳು ಕೊಟ್ಟಿರತಕ್ಕಂಥ ತಪ್ಪು ಮಾಹಿತಿಯಿಂದ ಈ ಉತ್ತರ ಬಂದಿದೆಯೆಂದು ನಾನು ಭಾವಿಸುತ್ತೇನೆ. ನ್ಯಾಯಾಲಯ ಅಲ್ಲಿ ನಡೆಯುತ್ತಿತ್ತು. ನಾನು ಸಂಬಂಧಪಟ್ಟ.....

ಅಧ್ಯಕ್ಷರು.—ಹೈಕೋರ್ಟಿಗೆ ರೆಫರ್ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಮತ್ತು ಹೈಕೋರ್ಟಿನ ಉತ್ತರಕ್ಕೆ ಕಾಯಲಾಗುತ್ತಿದೆ ಎಂದೂ ಹೇಳಿದ್ದಾರೆ.

ಶ್ರೀ ಬಿ. ಎಸ್. ಚೌವ್ಹಾಣ್.—ನಾನು ಕೇಳತಕ್ಕಂಥ ವಿಷಯ ಎಂದರೆ, ಅಲ್ಲಿ ನ್ಯಾಯಾಲಯ ನಡೆಯುತ್ತಿತ್ತು.

ಅಧ್ಯಕ್ಷರು.—ಯಾವಾಗ ?